# ಬೌದ್ಧ–ವಚನ ಮಾರ್ಗ

ಜಾತಿಯ ಅಹಂಕಾರ, ಮಹಿಳೆಯರು ಮತ್ತು ದುರ್ಬಲ ಸಮುದಾಯಗಳ ಮೇಲಿನ ಬರ್ಬರ ದಾಳಿ, ಅನ್ಯ ಧರ್ಮದವರ ಬಾಳನ್ನೇ ಸಂದೇಹಿಸುತ್ತಿರುವ ನಂಜಿನ ನುಡಿಗಳು, ದಿನೇ ದಿನೇ ಹಿಗ್ಗುತ್ತಿರುವ ಅಸಮಾನತೆಯ ಕಂದರ. ಇವುಗಳ ನಡುವೆ ಸಾಮೂಹಿಕ ಬಿಡುಗಡೆಯ ಸಂಘರ್ಷವನ್ನೇ ಮರೆವಿಗೆ ನೂಕಿರುವ ಸಮಾಜದ ನಡುವೆ ನಾವಿದ್ದೇವೆ. ಇಂತಹ ಹೊತ್ತಿನಲ್ಲಿ ಬುದ್ಧ ಮತ್ತು ಬಸವ ಮಾರ್ಗದೊಂದಿಗೆ ನಾವು ನಡೆಸುವ ಅನುಸಂಧಾನ ನಮ್ಮೊಳಗೆ ಮತ್ತೊಮ್ಮೆ ವಿಮೋಚನೆಯ ಕಿರು ದೀವಿಗೆಯನ್ನು ಬೆಳಗಿಸಬಲ್ಲದು ಎಂದು ಆಶಿಸೋಣ.

ಬುದ್ಧ ಮತ್ತು ಬಸವ ಮಾರ್ಗ ಎಂಬುದು ನಮಗೆ ದೊರೆತಿರುವ ಒಂದೇ ವೃಕ್ಷದ ಜೋಡಿ ಫಲಗಳು. ಇವುಗಳನ್ನು ಅವೈದಿಕ ಧಾರೆಗಳು ಎಂದು ಕರೆಯಲಾಗಿದೆ. ನಮ್ಮ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಜಾತಿ, ಅಸ್ಪೃಶ್ಯತೆ, ಲಿಂಗ ಅಸಮಾನತೆಗಳನ್ನು ತಿರಸ್ಕರಿಸುವುದರ ಜೊತೆಗೆ ಸಿರಿ ಸಂಪತ್ತು, ಅಧ್ಯಾತ್ಮಿಕ ಮತ್ತು ಅಧಿಕಾರದ ಮದವನ್ನು ಇಳಿಸಿ, ಲೋಕಹಿತವನ್ನು ಬಯಸುವ ಮಾನವೀಯ ಧ್ವನಿಯನ್ನು ವಚನ ಮಾರ್ಗ ಧರಿಸಿದೆ. ಇವೆರೆಡೂ ಕೇವಲ ಬೋಧನಾ ಮಾರ್ಗಗಳಲ್ಲ! ಅವು ನುಡಿದಂತೆ ನಡೆಯುವ ದಾರಿಗಳು. ಆದ್ದರಿಂದಲೇ ಮನುಕುಲದ ಚರಿತ್ರೆಯಲ್ಲಿ ಬುದ್ಧ ಮತ್ತು ಬಸವಾದಿ ಶರಣರನ್ನು ಮಾನವತೆಯ ರಾಯಭಾರಿಗಳೆಂದು ಕರೆಯುತ್ತಾರೆ. ಬೌದ್ಧ ಮತ್ತು ವಚನ ಪರಂಪರೆ ಮೂಲತಃ ದೈವ ಮಾರ್ಗವನ್ನು ನಿರಾಕರಿಸಿ ಗುರು ಮಾರ್ಗವನ್ನು ಸ್ವೀಕರಿಸಿವೆ. 'ಎನ್ನ ಸತ್ಯಳ ಮಾಡಿ ನಿತ್ಯವ ತೋರಿ / ತತ್ವವೆಂಬುದನರುಹಿದಿರಿ; ಮತ್ಸರವ ಹಿಂಗಿಸಿದಿರಿ; ಆಸೆ ರೋಷವನೆ ಹಿಂಗಿಸಿದಿರಿ; ಮಾತು ಮಥನವನೆ ಕೆಡಿಸಿದಿರಿ / ವ್ಯಾಕುಳವನೆ ಕೆಡಿಸಿ, ಜ್ಯೋತಿಯ ಬೆಳಗನೆ ತೋರಿದನಯ್ಯಾ' (ಲಿಂಗಮ್ಮ) ಎಂದು ಇದಕ್ಕೆ ಕಾರಣರಾದ ಇಷ್ಟದೈವದ ರೂಪದಲ್ಲಿರುವ ಗುರುವನ್ನು ನೆನೆಯುತ್ತಾರೆ. ಕಬೀರನಂತೂ ಇದನ್ನೇ ಇನ್ನಷ್ಟು ಮನಮುಟ್ಟುವಂತೆ ಹೇಳಿದ 'ಗುರು ಗೋವಿಂದ ಇಬ್ಬರೂ ಒಟ್ಟಿಗೆ ಎದುರಿಗೆ ನಿಂತಿದ್ದಾರೆ. ಇವರಿಬ್ಬರಲ್ಲಿ ನಾನು ಯಾರ ಪಾದಕ್ಕೆ ಮೊದಲು ಎರಗಲಿ? ಹೇ ಗುರು, ನಿನ್ನ ಮೇಲೆಯೇ ನನ್ನನ್ನು ನಿವಾಳಿಸಿ ಚೆಲ್ಲುತ್ತೇನೆ. ನಿನಗೇ ನಾನು ಶರಣು ಹೋಗುತ್ತೇನೆ. ಏಕೆಂದರೆ, ನೀನೆ ನನಗೆ ಗೋವಿಂದನನ್ನು ತೋರಿಸಿದೆ'. ಈ ಎರಡೂ ಮಾರ್ಗಗಳು ಯಾರನ್ನೂ ಹೊರಗೆ ನಿಲ್ಲಿಸದೆ, ಎಲ್ಲರನ್ನೂ ಒಳಗೊಳ್ಳುವಂತಹವು.

ಬೌದ್ಧಮಾರ್ಗ ಶಾರಿಪುತ್ತ, ಮೌದ್ಗಲ್ಯಾಯನ, ಉಪಾಲಿ, ಚುಂದ, ಅಂಗುಲಿಮಾಲ, ಆಮ್ರಪಾಲಿ ಹೀಗೆ ಸಮಾಜದ ಎಲ್ಲ ಹಿನ್ನೆಲೆಯವರನ್ನೂ ಒಳಗೊಂಡಿದೆ. ಈ ನಿಟ್ಟಿನಲ್ಲಿ ಬುದ್ಧದೇವನ ಬಿಕ್ಕು ಸಂಘಗಳು ಸಮಾಜದಲ್ಲಿ ಹೊಸ ಸಂಚಲನವನ್ನೇ ಮೂಡಿಸಿದವು. ಹೀಗೆಯೇ ವಚನ ಪರಂಪರೆಯಲ್ಲೂ ಸಮಾಜದ ಎಲ್ಲ ಕಾಯಕದವರು, ಎಲ್ಲ ಹಿನ್ನೆಲೆಯ ಶ್ರಮಜೀವಿಗಳು ಲಿಂಗ ಭೇದವಿಲ್ಲದೆ ಒಂದುಗೂಡಿದರು. ಈ ಪ್ರಕ್ರಿಯೆ ಮುಖ್ಯವಾಗಿ ನಮ್ಮ ಮುಂದಿರಿಸಿದ ತಾತ್ವಿಕ ಸಂಗತಿ ಯಾವುದೆಂದರೆ, ಕೇವಲ ಅಕ್ಷರ ಜ್ಞಾನವೇ ಅಂತಿಮವಾದದ್ದು ಎಂಬುದನ್ನು ತಿರಸ್ಕರಿಸಿ, ವೃತ್ತಿಗಳು, ಕೌಶಲಗಳೂ ಜ್ಞಾನದ ರೂಪಗಳೇ ಎಂಬುದನ್ನು ಹೇಳಿದವು. ವಚನಕಾರರು ಸಮಾಜಕ್ಕೆ ತೋರಿಸಿದ ಬಹುದೊಡ್ಡ ಸಾಮಾಜಿಕ ಮತ್ತು ಆಧ್ಯಾತ್ಮಿಕ ದರ್ಶನ ಇದು. ಈ ಬಗೆಯ ಒಂದುಗೂಡುವಿಕೆ ಇಂದಿಗೂ ಒಂದು ಆದರ್ಶ ಸಮಾಜದ ಸ್ವರೂಪವೆ ಆಗಿದೆ. ಬೌದ್ಧ ದರ್ಶನ ಶೀಲ, ಸಮಾಧಿ ಮತ್ತು ಪ್ರಜ್ಞೆಗೆ ಸಂಬಂಧಿಸಿದ್ದು. ಅಷ್ಟಾಂಗಿಕ ಮಾರ್ಗಗಳನ್ನು ಅನುಸರಿಸಿ ವಿಮೋಚನೆ ಪಡೆಯಬೇಕೆಂದು ಬೋಧಿಸುತ್ತದೆ.

'ಬಸವಾದಿ ಶರಣರನ್ನು ಕೇವಲ ಶರಣರೆಂದು, ವಚನಕಾರರೆಂದು, ಅನುಭಾವಿಗಳೆಂದು ಕರೆದರೆ ಸಾಲದು. ಅವರನ್ನು ಪ್ರಜಾಪ್ರಭುತ್ವವಾದಿಗಳೆಂದು ಕರೆಯುವ ಅಗತ್ಯವಿದೆ. ಅದು ಈ ಹೊತ್ತಿನ ಅಗತ್ಯ. ಸಮಾಜಕ್ಕೆ ಅಗತ್ಯ ಸಮೂಹ ಹಿತಕ್ಕೆ ಬೇಕಾದ ಪ್ರಜಾಪ್ರಭುತ್ವ ಮೌಲ್ಯಗಳನ್ನು ಹೆಕ್ಕಿ ಹೆಕ್ಕಿ ನೀಡಿದ ರಾಜಕೀಯ ಸಾಮಾಜಿಕ ಚಿಂತಕರು ಇವರು. ಹಾಗೆಂದು ನಾವು ಅವರನ್ನು ಓದುವ ಪ್ರಯತ್ನಗಳನ್ನು ಮಾಡಲಿಲ್ಲ. ಇನ್ನು ಮೇಲಾದರೂ ಬಸವಾದಿ ಶರಣರನ್ನು ಪ್ರಜಾಸತ್ತೆಯ ಪ್ರತಿಪಾದಕರೆಂದು ಪ್ರಧಾನವಾಗಿ ಗುರುತಿಸಿ ನಡೆಸುವ ಓದಿನ ಅಗತ್ಯವಿದೆ. ಮೊದಲು ಅವರು ಪ್ರಜಾಪ್ರಭುತ್ವವಾದಿಗಳು; ಎಲ್ಲರನ್ನೂ ಬಾಳಿಸಿಕೊಂಡು ಬದುಕಿದ ಸಾಮಾಜಿಕರು. ನಮಗೆ ಈಗ ಬೇಕಿರುವುದು ಅವರು ಬದುಕಿ ತೋರಿಸಿದ ಸಂಬಂಧದ ಜಗತ್ತು. ಎಲ್ಲರನ್ನೂ ಬಾಳಿಸಿಕೊಂಡು ಬಾಳಿದ ಆದರ್ಶ. ಅದು ತಾನಾಗಿ ಬರುವುದಿಲ್ಲ; ನಾವಾಗಿ ವಿವೇಕದಿಂದ ಅನ್ವಯಿಸಿಕೊಳ್ಳಬೇಕು' (ಎಸ್. ನಟರಾಜ ಬೂದಾಳು).

ಪ್ರಮಾಣ ನಿರಾಕರಣೆ ಬೌದ್ಧರಿಗೆ ಮಾತ್ರ ಸೀಮಿತವಾಗಿಲ್ಲ. ಅದು ವಚನಕಾರರು ಮತ್ತು ತತ್ವಸಾಧಕರವರೆಗೂ ವ್ಯಾಪಿಸಿಕೊಂಡಿದೆ. ವರ್ಣಾಶ್ರಮ ಜಾತಿ ವ್ಯವಸ್ಥೆ, ವೇದ, ಶಾಸ್ತ್ರಗಳನ್ನು ತಿರಸ್ಕರಿಸುವುದು ಇವುಗಳ ಸಾಮಾನ್ಯ ಗುಣ. ಒಬ್ಬರನ್ನು ಮುಟ್ಟಬಹುದು, ಮತ್ತೊಬ್ಬರನ್ನು ಮುಟ್ಟಬಾರದು ಎಂಬ ಸಾಮಾಜಿಕ ಅಸಭ್ಯತೆಯ ಆಚರಣೆಗಳನ್ನು ಪಾಲಿಸುವ ವೈದಿಕ ಧರ್ಮದ ಸಂಕೋಲೆಗಳನ್ನು ನಿರಾಕರಿಸುವ ಬೌದ್ಧ ಮತ್ತು ಶರಣ ದರ್ಶನಗಳು ಮೂಲತಃ ಪ್ರತಿರೋಧದ ಮಾರ್ಗಗಳು. ಮುಟ್ಟು–ಮೈಲಿಗೆ, ಶ್ರೇಷ್ಠ–ಕನಿಷ್ಠ ಕಲ್ಪನೆಗಳನ್ನು ನಿರಾಕರಿಸಿ ಲೌಕಿಕ ಬದುಕನ್ನು ಬಿಟ್ಟು ಯಾವ ಅಧ್ಯಾತ್ಮಿಕ ಸಾಧನೆಗಳು ಇಲ್ಲ ಎಂಬುದನ್ನು ಸಮಾಜಕ್ಕೆ ತಿಳಿಸಿದವು. ಈ ಮಾರ್ಗಗಳು ಅಧ್ಯಾತ್ಮಿಕ ಸಾಧನೆಗೆ ಸನ್ಯಾಸವೇ ಮೊದಲು ಎನ್ನುವುದನ್ನು ಮಾನ್ಯ ಮಾಡದೆ, ಸಾಂಸಾರಿಕ ಜೀವನದಲ್ಲಿದ್ದೂ ಅಧ್ಯಾತ್ಮಿಕ ಸಾಧನೆ ಸಾಧ್ಯ ಎನ್ನುವುದನ್ನು ಲೋಕಕ್ಕೆ ತೋರಿಸಿಕೊಟ್ಟವು.

ಬೌದ್ಧರಲ್ಲಿ ಸಂಸಾರದಲ್ಲಿದ್ದೂ ಆ ಧರ್ಮವನ್ನು ಪಾಲಿಸುವವರನ್ನು ಉಪಾಸಕರು ಎನ್ನುತ್ತಾರೆ. ವಚನ ಪರಂಪರೆಯಲ್ಲೂ ಸಂಸಾರದಲ್ಲಿದ್ದೂ ಶರಣ ಧರ್ಮವನ್ನು ಸ್ವೀಕರಿಸಿದವರ ಸಂಖ್ಯೆ ಹೇರಳವಾಗಿದೆ. ಮುಖ್ಯವಾಗಿ ಬೌದ್ಧ ಮತ್ತು ವಚನ ಮಾರ್ಗಗಳು ವ್ಯಕ್ತಿಗತ ಬಿಡುಗಡೆಗೆ ಬದಲಾಗಿ ಸಮಷ್ಟಿಯ ವಿಮೋಚನೆಯನ್ನೇ ಬಯಸುವಂತಹವು. ಇಂದು ಜಗತ್ತಿಗೆ ಬೇಕಾಗಿರುವುದು ಇದೆ. ಆದ್ದರಿಂದಲೇ ಇವು ಸಮಾಜ ಹಾಗೂ ಜನರನ್ನು ಒಂದುಗೂಡಿಸುವ ಸಾಮರಸ್ಯದ ಸೇತುವೆಗಳಾದವು. ವಚನ ಪರಂಪರೆಯ ಮೂಲವನ್ನು ಭಾರತೀಯ ಸಿದ್ಧಪರಂಪರೆಯ ಸ್ಥಳೀಯ ಫಲ ಎಂದು ಗುರುತಿಸುತ್ತಾರೆ. ಈ ಸಿದ್ಧಪರಂಪರೆಯ ಮೊದಲ ಗುಣವೆಂದರೆ, ಅದು ವ್ಯಕ್ತಗೊಳ್ಳಲು ಆಶ್ರಯಿಸುವುದು ಸ್ಥಳೀಯ ಭಾಷೆಯನ್ನೆ. ಅದರಂತೆ ಬೌದ್ಧ ಮತ್ತು ವಚನಗಳು ಪಾಲಿ ಮತ್ತು ಕನ್ನಡವನ್ನು ಆಶ್ರಯಿಸಿದವು.

■ ಜೆ.ವಿ. ಆನಂದಮೂರ್ತಿ

## ಮಾತೇ ಮುತ್ತು

- ತನ್ನ ಜಾತಿಯವರೊಂದಿಗೆ ಮಾತ್ರ ಉಲ್ಲಾಸ ಹೊಂದುವವ ಕ್ರಮೇಣ ಮಾನಸಿಕವಾಗಿ ನಶಿಸಿ ಹೋಗುತ್ತಾನೆ. ಸಾಮಾಜಿಕವಾಗಿ ಅನ್ಯಾಯದ ವ್ಯಕ್ತಿಯಾಗುತ್ತಾನೆ.

  —ಪಿ. ಲಂಕೇಶ್

- ಈ ಜಗತ್ತೆನ್ನುವುದು ನಮ್ಮನ್ನು ನಾವು ಗಟ್ಟಿಗೊಳಿಸಲೆಂದೇ ಇರುವ ವ್ಯಾಯಾಮ ಶಾಲೆ.

  —ಸ್ವಾಮಿ ವಿವೇಕಾನಂದ

- ಸದ್ಗುಣ ಮತ್ತು ದುರ್ಗುಣಗಳ ವ್ಯತ್ಯಾಸ ತಿಳಿಯದಾದಾಗ ನಮ್ಮ ಬೆಳವಣಿಗೆ ನಿಲ್ಲುತ್ತದೆ.

  —ಮಹಾತ್ಮ ಗಾಂಧಿ

- ಕುಂಬಾರನ ಸೂಕ್ಷ್ಮ ಕಸುಬುದಾರಿಕೆ, ಮೇದರವನ ಬುಟ್ಟಿ ಹೆಣೆಯುವ ಕಲೆಗಾರಿಕೆ ಮಾನ್ಯತೆ ಕಳೆದುಕೊಂಡು ಓದು ಬರಹ, ಜ್ಞಾಪಕ ಶಕ್ತಿ, ಇಂಗ್ಲಿಷ್ ಮಾತುಗಳು ಪರೀಕ್ಷೆಗಳಲ್ಲಿ ಮೆರಿಟ್‌ಗಳಾದವು. ಮೇದರನವನೂ, ಕುಂಬಾರನೂ, ಅಗಸನೂ ಮೆರಿಟ್ ಇಲ್ಲದವನಾಗಿ ಕೆಲಸ ಮತ್ತು ಅನ್ನ ಕಳೆದುಕೊಂಡ.

  —ಕೆ.ಪಿ. ಪೂರ್ಣಚಂದ್ರ ತೇಜಸ್ವಿ

- ಯಾರು ಪ್ರೀತಿಸುತ್ತಾರೋ ಅವರಿಗೆ ಮಾತ್ರ ತಿದ್ದುವ , ಶಿಕ್ಷಿಸುವ ಅಧಿಕಾರ ಉಂಟು.

  —ರವೀಂದ್ರನಾಥ್ ಟ್ಯಾಗೋರ್.

- ತಿಳಿದವಗೆ ಜಗವೆಲ್ಲ ರಸದ ಊಟ.

  — ಜಿ.ಎಸ್. ಶಿವರುದ್ರಪ್ಪ